## 24. ಹೊಸ ಶಿಕ್ಷಣ ನೀತಿ ನವ ಭಾರತದ ಬುನಾದಿ

ಮಗುವಿನ ಕಲಿಕಾ ಸಾಮರ್ಥ್ಯಕ್ಕೆ ಭದ್ರ ಅಡಿಪಾಯ ಒದಗಿಸುವ ಉದ್ದೇಶದಿಂದಲೇ 5ನೇ ತರಗತಿವರೆಗೂ ಮಾತೃ ಭಾಷೆಯಲ್ಲಿ ಕಲಿಕೆಗೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಒತ್ತು ನೀಡಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ಉನ್ನತ ಶಿಕ್ಷಣದಲ್ಲಿ ಪರಿವರ್ತನೆ ಹಾಗೂ ಸುಧಾರಣೆಗಳ ಕುರಿತ ಸಮಾವೇಶವನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಮಾತೃ ಭಾಷೆಗೆ ಅದಮ್ಯವಾದ ಶಕ್ತಿ ಇದೆ. ಯಾವುದೇ ಮಗು ತನ್ನ ಮಾತೃ ಭಾಷೆಯಲ್ಲಿ ಕಲಿತಾಗಲೇ ವಿಷಯಗಳನ್ನು ಅದ್ಭುತವಾಗಿ ಗ್ರಹಿಸಬಲ್ಲದು ಎಂದು ಪ್ರತಿಪಾದಿಸಿದರು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ನವ ಭಾರತದ ಅಡಿಪಾಯವಾಗಿದೆ. ಇದು ರಾಷ್ಟ್ರೀಯ ಮೌಲ್ಯಗಳ ಹಾಗೂ ಗುರಿಗಳ ಪ್ರತಿಬಿಂಬವಾಗಿದೆ. ಸುದೀರ್ಘ ಚರ್ಚೆ ಹಾಗೂ ಶಿಕ್ಷಣ ತಜ್ಞರ ಸಮಾಲೋಚನೆಯ ಬಳಿಕವೇ ನೂತನ ಶಿಕ್ಷಣ ನೀತಿಗೆ ಸರ್ಕಾರ ಅನುಮೋದನೆ ನೀಡಿತು. ಎಲ್ಲರೂ ಹೊಸ ನೀತಿಯನ್ನು ಒಪ್ಪಿಕೊಂಡಿರುವುದು ಇದರಲ್ಲಿನ ಗಟ್ಟಿತನಕ್ಕೆ ಸಾಕ್ಷಿಯಾಗಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಹಂತಹಂತವಾಗಿ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಇಚ್ಛಾಶಕ್ತಿ ಸರ್ಕಾರಕ್ಕಿದ್ದು, ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಕ್ರಾಂತಿ ಸಂಭವಿಸುವುದನ್ನು ಇಡೀ ಜಗತ್ತು ನೋಡಲಿದೆ ಎಂದು ಅಭಿಪ್ರಾಯಪಟ್ಟರು.

ಪ್ರತಿಯೊಬ್ಬ ವಿದ್ಯಾರ್ಥಿಯೂ ತನಗೆ ಇಷ್ಟವಾದುದನ್ನೇ ಕಲಿಯಬೇಕು ಎಂಬುದು ನೀತಿಯ ತಿರುಳಾಗಿದೆ. ಇಲ್ಲಿ ಹಲವು ವಿಷಯಗಳ ಕೋರ್ಸ್ ಮತ್ತು ಮಲ್ಟಿಪಲ್ ಎಂಟ್ರಿ ಮತ್ತು ಎಕ್ಸಿಟ್ ಆಯ್ಕೆಗಳು ಲಭ್ಯವಾಗಲಿದೆ. ಇದರಿಂದ ಕಲಿಕೆ ಮಧ್ಯೆ ತಾನು ಓದುವ ವಿಷಯದ ಮೇಲೆ ಆಸಕ್ತಿ ಇಲ್ಲದಿದ್ದರೆ ಅದನ್ನು ಬದಲಾಯಿಸಲು ವಿದ್ಯಾರ್ಥಿಗೆ ಅವಕಾಶ ಸಿಗುತ್ತದೆ. ಶಿಕ್ಷಣವು ನಮ್ಮ ಬದುಕು ರೂಪಿಸುವಂತಾಗಬೇಕು ಆಗ ಮಾತ್ರ ಕಲಿಕೆ ಸಾರ್ಥಕವಾಗುತ್ತದೆ ಎಂದರು.

**ಕೌಶಲ್ಯಕ್ಕೆ ಒತ್ತು:** ದೇಶವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಬೇಕೆಂದರೆ ಅದಕ್ಕೆ ಬುನಾದಿಯಾಗಿ ಶಿಕ್ಷಣ ನೀತಿ ಇರಬೇಕಾಗುತ್ತದೆ. ಇದನ್ನು ಸಕಾರಗೊಳಿಸಲೆಂದೇ ಹೊಸ ನೀತಿಯಲ್ಲಿ ಪುಸ್ತಕಗಳ ಹೊರೆ ಕಡಿಮೆ ಮಾಡಿ ಕೌಶಲಾಧಾರಿತ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಕಲಿಕೆ ಎಂಬುದು ನಿರಂತರ ಪ್ರಕ್ರಿಯೆಯಾಗಿದ್ದು, ಕೌಶಲ ಹೊಂದುವುದು, ಅದನ್ನು ಕಾಲಕಾಲಕ್ಕೆ ತಕ್ಕಂತೆ ಮಾರ್ಪಡಿಸಿ ವೃದ್ಧಿಸಿಕೊಳ್ಳುವುದು ಅಗತ್ಯವಾಗಿದೆ. ಈ ಮೂಲಕ ಜಗತ್ತಿಗೆ ಅಗತ್ಯವಿರುವ ತಾಂತ್ರಿಕತೆ ಮತ್ತು ಪ್ರತಿಭೆಗಳನ್ನು ದೊಡ್ಡ ಪ್ರಮಾಣದಲ್ಲಿ ಕೊಡಬಲ್ಲ ಸಾಮರ್ಥ್ಯ ಭಾರತಕ್ಕೆ ಸಾಧ್ಯವಾಗಲಿದೆ ಎಂದು ಮೋದಿ ಹೇಳಿದರು.

ಈಗಿರುವ ಶಿಕ್ಷಣ ವ್ಯವಸ್ಥೆಯು ಏನನ್ನು ಯೋಚಿಸಬೇಕು ಎನ್ನುವುದು ಮಾತ್ರವೇ ಕಲಿಸುತ್ತೆ. ಆದರೆ, ಹೊಸ ಶಿಕ್ಷಣ ನೀತಿಯು ಹೇಗೆ ಯೋಚಿಸಿಬೇಕು ಎಂಬುದನ್ನು ತಿಳಿಸಿಕೊಡುವ ಮೂಲಕ ನಮ್ಮ ಆಲೋಚನಾ ಶಕ್ತಿಯ ಲಹರಿಯನ್ನು ವಿಸ್ತರಿಸುತ್ತೆ. ಇದರಿಂದ ವೈಜ್ಞಾನಿಕವಾಗಿ ಸಂಶೋಧನಾತ್ಮಕವಾಗಿ ಹಾಗೂ ವಿಶ್ಲೇಷಣಾತ್ಮಕವಾಗಿ ಕಲಿಕೆ ಸಾಧ್ಯವಾಗಲಿದೆ. ಕಲಿತ ಶಿಕ್ಷಣದಿಂದ ಭಾರತವನ್ನು ಸೂಪರ್ ಪವರ್ ಮಾಡಬಹುದಾಗಿದೆ ಎಂದರು.

ತ್ರಿಭಾಷ ಸೂತ್ರ., ಮಕ್ಕಳ ಶೈಕ್ಷಣಿಕ ಭಾರ ಕಡಿಮೆ ಮಾಡುವ ಶಿಕ್ಷಣ ಹಕ್ಕು ಕಾಯಿದೆಯ ವ್ಯಾಪ್ತಿ ಹೆಚ್ಚಿಸುವ ಪಠ್ಯಕ್ರಮಗಳ ಆಮೂಲಾಗ್ರ ಬದಲಾವಣೆ ಅಂಶಗಳು ನೂತನ ಶಿಕ್ಷಣ ನೀತಿಯಲ್ಲಿವೆ. ತ್ರಿಭಾಷಾ ಸೂತ್ರಕ್ಕೆ ತಮಿಳುನಾಡು ಅಪಸ್ವರ ಎತ್ತಿದೆ.

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವ ರಮೇಶ್ ಪೋಖ್ರಿಯಾಲ್, ಸಹಾಯಕ ಸಚಿವ ರಾಧಾಕೃಷ್ಣ ಧೋತ್ರೆ, ನೂತನ ಶಿಕ್ಷಣ ನೀತಿ ಸಮಿತಿ ಅಧ್ಯಕ್ಷ ಡಾ: ಕಸ್ತೂರಿ ರಂಗನ್ ಭಾಗವಹಿಸಿದ್ದರು. ವಿಶ್ವವಿದ್ಯಾಲಯ ಧನ ಸಹಾಯಕ ಆಯೋಗ ರೂಪಿಸಿರುವ ಉನ್ನತ ಶಿಕ್ಷಣದಲ್ಲಿ ಇಂಟರ್ನ್‌ಶಿಪ್ ಒಳಗೊಂಡ ಪದವಿಗಳ ಮಾರ್ಗಸೂಚಿ ನಿಯಮಗಳನ್ನು ಪೋಖ್ರಿಯಾಲ್ ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಿದರು.

ಆಧಾರ:ವಿಜಯಕರ್ನಾಟಕ, ದಿನಾಂಕ:08.08.2020